# ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಸಹಗಮನ ಮರಣ ವರ್ಣನೆ

**ರಮೇಶ್ ಸಿ,**

**ಪ್ರವೇಶ**

ಕನ್ನಡ ಕಾವ್ಯದಲ್ಲಿ ಸಹಗಮನ ಮರಣ ವಿಚಾರವು ಪಂಪನ ಪಂಪಭಾರತದಲ್ಲಿ ಮೊದಲು ಪ್ರಸ್ತಾಪವಾಗಿದ್ದು ಪಾಂಡುರಾಜ ಮರಣ ಹೊಂದಿದಾಗ ಮಾದ್ರಿಯು ಸಹಗಮನ ಮರಣ ಪಡೆಯುತ್ತಾಳೆ.[5] ರನ್ನನ ಗದಾಯುದ್ಧದಲ್ಲಿ[6] ಈ ವಿಚಾರದ ಪ್ರಸ್ತಾಪವಾಗಿದ್ದು ಧರ್ಮರಾಯನಿಗೆ ದ್ರೌಪದಿಯು ಹೇಳುವ ಮಾತಿನಲ್ಲಿ ಶತ್ರುಗಳೊಂದಿಗೆ ಸಂಧಿ ಮಾಡಿಕೊಂಡರೆ ಅಗ್ನಿ ಪ್ರವೇಶ ಮಾಡಿ ಮರಣವನ್ನು ಪಡೆಯುತ್ತೇನೆ ಎನ್ನುತ್ತಾಳೆ. ಇಲ್ಲಿ ಗಂಡಂದಿರುಗಳಿಗಾಗಿ ಹೆಂಡತಿ ಸಾಯುವ ವಿಚಾರ ಪ್ರಸ್ತಾಪವಾಗಿದೆ. ಇದು ಒಂದು ಅರ್ಥದಲ್ಲಿ ವೇಳೆವಾಟಿ ರೂಪದ ಸಹಗಮನ ಮರಣವಾಗಿದೆ. ಅಜಿತನಾಥ ಪುರಾಣದಲ್ಲಿ[7] ಸಹಗಮನವನ್ನು 'ಶುಭಚರಿತದ ಮರಣ' ಎಂದು ಕರೆದಿದ್ದು ಪ್ರಾಚೀನ ಕರ್ನಾಟಕದಲ್ಲಿ ಸ್ತ್ರೀಯರು ಆದರ್ಶ ನಾರಿಯರಾಗಿ ತಮ್ಮ ಶೀಲ ಚಾರಿತ್ರ್ಯದಿಂದ ಬೆಳಗಿದ್ದಾರೆ. ಅಲ್ಲದೆ ಅಂದಿನ ಸಮಾಜದಲ್ಲಿ ತಮಗೆ ಇಷ್ಟವಿಲ್ಲದಿದ್ದರೂ ಶೋಷಣೆ, ದೌರ್ಜನ್ಯಗಳಿಗೆ ಬಲಿಯಾಗಿದ್ದಾರೆ. ಇವಳು ತನ್ನ ಗಂಡ ಯುದ್ಧಕ್ಕೆ ಹೋದಾಗ ಸತ್ತ ಸುದ್ದಿಯನ್ನು ತಿಳಿದು ಪ್ರಾಣಾರ್ಪಣೆ ಮಾಡಿಕೊಂಡಿದ್ದಾಳೆ. ಸ್ವತಃ ತನ್ನ ಗಂಡ ಸತ್ತಾಗ ಅವನ ಜೊತೆಗೆ ಚಿತೆಯೇರಿ ಮರಣವನ್ನು ಪಡೆದಿದ್ದಾಳೆ. ಸಹಗಮನ ಮರಣವು ಪ್ರಪಂಚದ ಎಲ್ಲಾ ಜನಾಂಗಗಳಲ್ಲಿ ಕಂಡು ಬಂದಿದ್ದು ರಾಜಮನೆತನಗಳಲ್ಲಿ ವಿಶೇಷವಾಗಿ ಆಚರಣೆಯಲ್ಲಿದ್ದಿತು. ಸಹಗಮನ ಮರಣಕ್ಕೆ ಧಾರ್ಮಿಕವಾದ ಕೆಲವು ನಂಬಿಕೆಗಳು ಕಾರಣವಾದರು ಸತ್ತ ಗಂಡನಿಗೆ ಅವನ ಜೊತೆ ಹೆಂಡತಿಯು ಸಾಯುವುದರ ಮೂಲಕ ಈ ಲೋಕದಲ್ಲದೆ ಪರಲೋಕದಲ್ಲಿಯೂ ಸಹಕಾರಿಯಾಗಿರಬೇಕೆನ್ನೆವುದು ಸಹಗಮನ ಮರಣಕ್ಕೆ ಕಾರಣವಾಗಿದ್ದಿತು.[1] ಭಾರತ ಮತ್ತು ಕರ್ನಾಟಕದಲ್ಲಿ ರಾಜಮನೆತನಗಳು ಸತಿ ಪದ್ಧತಿಯನ್ನು ರೂಢಿಸಿಕೊಂಡಿರುವುದರ ಕಾರಣ ಜನತೆಯು ಅದನ್ನು ಅನುಸರಿಸಿಕೊಂಡು ಬಂದಂತೆ ಕಾಣುತ್ತದೆ.[2] ವೇದ ಸ್ಮೃತಿ ಪುರಾಣಗಳಲ್ಲಿ ಮನುವಿನ ಶಾಸ್ತ್ರಗಳಲ್ಲಿ ವರಹಮಿಹಿರನ ಬೃಹತ ಸಂಹಿತಗಳಲ್ಲಿ ಸಹಗಮನ ಮರಣದ ಉಲ್ಲೇಖಗಳಿವೆ.[3] ಕರ್ನಾಟಕದಲ್ಲಿ ಮಾಸ್ತಿಗಲ್ಲುಗಳು ಈ ಆಚರಣೆ ಕುರಿತು ಉತ್ತಮ ಮಾಹಿತಿಯನ್ನು ನೀಡಿವೆ. ಸಹಗಮನ ಮರಣವು ಮೊದಮೊದಲು ಒಡಸಾಯುವ, ಸಹಮರಣದ ಆದರ್ಶಗಳಲ್ಲಿ ನಡೆದುಕೊಂಡು ಬಂದಂತೆ ಕಾಣುತ್ತದೆ. ಅದಕ್ಕೆ ಸಹಗಮನ ಮರಣಕ್ಕೆ ಜೊತೆಗೂಡಿ ಸಾಯಿ, ಕೂಡಿ ಸಾಯು ಎಂಬ ಮೊದಲಾದ ಪರಿಕಲ್ಪನೆಯಲ್ಲಿ ಕರೆಯುತ್ತಾರೆ. ಕನ್ನಡ ನಾಡಿನಲ್ಲಿ ದೊರೆತ ಬೆಳತೂರಿನ ದೇಕಬ್ಬೆಯ ಶಾಸನವು ಸಹಗಮನ ಮರಣ ಕುರಿತು ಮಾಹಿತಿ ನೀಡುವ ಮಾಸ್ತಿಕಲ್ಲುಗಳಲ್ಲಿ ತುಂಬಾ ಪ್ರಸಿದ್ಧವಾದುದಾಗಿದೆ. ಈ ಶಾಸನವು ನುಗುನಾಡಿನ ರವಿಗನ ಮಗಳು ದೇಕಬ್ಬೆ ಇವಳನ್ನು 'ಏಚ' ಎಂಬುವನಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ಆದರೆ 'ಏಚ' ದಾಯಾದಿಗಳೊಂದಿಗೆ ಯುದ್ಧ ಮಾಡುವಾಗ ಸೆರೆ ಸಿಕ್ಕು ಮರಣವನ್ನು ಪಡೆಯುತ್ತಾನೆ. ಈ ಸುದ್ದಿ ತಿಳಿದ ದೇಕಬ್ಬೆಯು ಸಹಗಮನ ಮರಣ ಪಡೆಯಲು ನಿರ್ಧರಿಸುತ್ತಾಳೆ. ಹೀಗೆ ಈ ದೇಕಬ್ಬೆ ಶಾಸನವು ದೇಕಬ್ಬೆಯು ಅನುಗಮನ ಮರಣ ಪಡೆದ ವಿವರವನ್ನು ತಿಳಿಸುತ್ತದೆ.[4]

**ಎರಡೆ ವಲಂ ಕುಲವಧುಗಾ**
**ಚರಿಸಲ್ ಪತಿಯಿಂ ಪರೋಕ್ಷದೊಳ್ ಜೀನದೀಕ್ಷಾ**
**ಮರಣಂ ಮೇಣಳಿಪಿನಿಂದೆ ಬಾಳ್ವುದು ದೊರೆಯೇ**
**ನಿನಗೆ ಮಗಂ ಜಗತ್ತಿಲಕನಿರ್ದಪನಕ್ಕ ಮಗಂ ಸಮರ್ಥನ**
**ಪ್ಪಿನವಿರು ನಾಗದೇವನೊಡನಾಂ ಬೆಸಕೇಳ್ದಪೆನೆಂದುಬೇಡಿಕೊಂ**
**ಡಿನಿಯನದಪ್ಪಿಕೊಂಡು ಚಿತಮಾಗೆ ಚಿತಾಗ್ನಿಯೊಳಣ್ಮಿ ಸತ್ತ ಸ**
**ಜ್ಜನಿಕೆಯ ಪೆಂಪು ಸಜ್ಜನಕೆ ಬಣ್ಣಿಸೆ ಸಂದುದು ಗುಂಡಮಬ್ಬೆಯ**

ಎಂದು ಗುಂಡಮಬ್ಬೆಯ ಸಹಗಮನ ಮರಣವನ್ನು ಹೇಳುವ ಮೂಲಕ ಸಹಗಮನ ಮರಣ ಆಚರಣೆಯ ಶ್ರದ್ಧೆಯನ್ನು ಎತ್ತಿ ಹಿಡಿದಿದೆ. ಹೆಂಡತಿ ಕೊಂಡವೇರಿ ತನ್ನನ್ನು ತಾನು ಸುಟ್ಟುಕೊಂಡು ಪ್ರಾಣ ತ್ಯಾಗ ಮಾಡುವುದು ಸಾಮಾಜಿಕ ದೃಷ್ಟಿಯಲ್ಲಿ ಪವಿತ್ರವಾಗಿತ್ತು ಎಂದು ಹೇಳಿದೆ. ಕರ್ನಾಟಕದಲ್ಲಿ ಸಹಗಮನ ಮರಣಕ್ಕೆ ಬೇರೆ ಬೇರೆ ಕಾರಣಗಳನ್ನು ಕನ್ನಡ ಕಾವ್ಯಗಳು ತಿಳಿಸಿವೆ. ಕುಟುಂಬದಲ್ಲಿ ಪತಿಯು ಮರಣ ಹೊಂದಿದರೆ ಆ ಮರಣದ ಪಾಪವು ತನ್ನನ್ನು ತಡೆಯದೆ ನರಕದಲ್ಲಿ ಮುಳುಗಿಸುತ್ತದೆ ಎಂಬ ಪತ್ನಿಯರ ಈ ಬಗೆಯ ನಂಬಿಕೆ ಸಹಗಮನ ಮರಣಕ್ಕೆ ಕಾರಣವಾಗಿದ್ದಿತು ಎಂಬುದನ್ನು ಬ್ರಹ್ಮಶಿವ ಕವಿ ಸಮಯ ಪರೀಕ್ಷೆಯಲ್ಲಿ[8]

**ಪುರುಷಂ ಸತ್ತಡೆ ಪುತ್ರನುಳ್ಳವರು ಸಾಯಲ್ವಲ್ಲದೆಂಬರ್ಥರಾ**
**ಮರರೇಕಾಗಮ ನಿಯಮಮಾಗಿ ಧನಮಂ ನಿಃ ಪುತ್ರನಾವಾಗಳಾ**
**ದರದಿಂದಿಂ ತವಗಿತ್ತು ಸಾವಡೆನತುಂ ಸಾಯಲ್ಕೈ ಪೇಳ್ವರ್ಮಹಾ**
**ಪುರುಷರ್ಸತ್ತಡೆ ಬದ್ದರೊಂದೊಡಮೆಯಂ ಕೊಳುವೊಂದು ಪಾಯಮ್ಮಿಗಲ್**

ಎಂದು ಹೇಳುತ್ತಾನೆ. ಇಲ್ಲಿ ಕವಿಯು ಸಹಗಮನ ಮರಣಕ್ಕೆ ಮೂರು ಕಾರಣಗಳನ್ನು ಹೇಳುತ್ತಾನೆ. ಅದರಲ್ಲಿ ಪತಿಯ ಮರಣದ ತರುವಾಯ ಪತ್ನಿಯು ಬೇರೆಯವರ ವಶವಾಗಬಹುದು ಎಂಬ ನಂಬಿಕೆ ಸ್ತ್ರೀಯರ ಸಹಗಮನ ಮರಣಕ್ಕೆ ಕಾರಣವಾಗಿದೆ. ಹಿಂದಿನ ಕಾಲದಲ್ಲಿ ಹಿರಿಯರು ಅನುಸರಿಸಿಕೊಂಡು ಬಂದ ಬದುಕಿನ ಪಾತಿವ್ರತ್ಯದ ಅಂಶಗಳು ಅವಳು ಬದುಕಿ ಉಳಿಯುವುದಕ್ಕೆ ಸಹಾಯಕವಾಗದೆ ಇರುವುದು ಅವಳ ಸಹಗಮನ ಮರಣಕ್ಕೆ ಕಾರಣವಾಗಿದೆ. ಪತಿಯ ಮರಣದ ತರುವಾಯ ಸತಿಯನ್ನು ಮರಣಕ್ಕೆ ತಳ್ಳಿ ಅವಳ ಸಂಪತ್ತು, ಆಸ್ತಿಯನ್ನೆಲ್ಲ ವಶಮಾಡಿಕೊಳ್ಳಬೇಕೆಂಬ ಪ್ರಭು ಮತ್ತು ಪುರೋಹಿತಶಾಹಿ ವರ್ಗದವರು ಇಂತಹ ಮರಣ ಸಂಪ್ರದಾಯಗಳನ್ನು ಸೃಷ್ಟಿ ಮಾಡಿರಲು ಸಾಧ್ಯವಾದಂತೆ ಕಾಣುತ್ತದೆ. ಹೀಗೆ ಈ ಮೂರು ಅಂಶಗಳಲ್ಲಿ ಬ್ರಹ್ಮಶಿವ ಕವಿಯು ಸಹಗಮನ ಮರಣಕ್ಕೆ ಕಾರಣಗಳನ್ನೇಳಿದರು.

**ಪುರುಷನ ಪರೋಕ್ಷದೊಳ್ ಪೆರ**
**ಗಿರದಾಗಡೆ ಸತ್ತಳಪ್ಪೊಡಾಕೆಗೆ ಸಗ್ಗಂ**
**ದೊರೆಕೊಳ್ಗುಮೆಂಬ ದುರ್ಬೋ**
**ಧರ ಮಾತಂ ಕೇಳ್ದು ನಂಬಿ ಕಿಚ್ಚಂ** ಪುಗುವರ್[9]

ಎಂದು ಸಹಗಮನ ಮರಣ ಪದ್ಧತಿಯನ್ನು ತಿರಸ್ಕರಿಸುತ್ತಾನೆ. ಬಂದನೆ ನಾಗವರ್ಮ ರಚಿಸಿದ ಕರ್ಣಾಟಕ ಕಾದಂಬರಿಯಲ್ಲಿ ಸಹಗಮನ ಮರಣ ವಿಚಾರ ಬಂದಿದ್ದು ಮಹಾಶ್ವೇತೆಯ ಗಂಡನಾದ ಪುಂಡರೀಕ ಮರಣವನ್ನು ಪಡೆದಿದ್ದಾಗ ಮಹಾಶ್ವೇತೆ ಸಹಗಮನ ಪಡೆಯಲು ಇಚ್ಛಿಸುತ್ತಾಳೆ. ಆದರೆ ಚಂದ್ರಾಪೀಡನು ತಡೆಯುತ್ತಾನೆ. ಈ ವಿಚಾರ ಕರ್ಣಾಟಕ ಕಾದಂಬರಿಯಲ್ಲಿ.[10]

**ಸತ್ತವರೇಟ್ಟಿರೆ ಪೇಟಿಕೊಡ**
**ಸತ್ತರೆ ತಮ್ಮಟಿತನಳವಿಯಂ ಮಟ್ಟಿಸಲೆಂ**

**ದುತ್ತವಳಿಕೆಯೊಳೆ ಸಾವರ್**
**ಸತ್ತವರವರ್ಗಾವ ಹಿತಮನಾಚರಿಸುವರೋ**

ಎಂದು ಬಂದಿದೆ. ಇಲ್ಲಿ ಚಂದ್ರಾಪೀಡನು ಮಹಾಶ್ವೇತೆಯ ಸಹಗಮನವನ್ನು ಬುದ್ದಿವಾದದ ಮಾತುಗಳನ್ನು ಹೇಳುವ ಮೂಲಕ ತಡೆಯುತ್ತಾನೆ. ಅವನೇ ಹೇಳುವ ಹಾಗೆ "ಸತ್ತ ಗಂಡನ ಜೊತೆಗೆ ಸಹಗಮನ ಮಾಡಿದರೆ ಸತ್ತವರು ಏಳುತ್ತಾರೆಯೆ? ತಮ್ಮ ದುಃಖ ಭಾರವನ್ನು ಅಡಗಿಸಬೇಕೆಂಬ ಒಂದು ಕಾತುರತೆಯಲ್ಲಿ ಕೆಲವರು ಜೊತೆಯಲ್ಲಿ ಸಾಯುತ್ತಾರೆ. ಅಂತಹವರು ಸಾಯುವುದರಿಂದ ಸತ್ತವರಿಗೆ ಯಾವ ಉಪಕಾರ ಮಾಡಿದಂತಾಗುತ್ತದೆ. ಇದ್ದರಾದರೂ ಅವರು ಸತ್ತವರಿಗೆ ತರ್ಪಣವನ್ನಾದರೂ ನೀಡಬಹುದು ಎಂದು ಹೇಳುವ ಮೂಲಕ ಮಹಾಶ್ವೇತೆಯ ಸಹಗಮನ ಮರಣವನ್ನು ತಡೆಯುತ್ತಾನೆ. ಜನ್ನ ಕವಿ ಅನಂತನಾಥಪುರಾಣದಲ್ಲಿ[11] ಸಹಗಮನದ ದೃಶ್ಯ ಕಂಡು ಬಂದಿದೆ. ಚಂಡಶಾಸನನು ಸುನಂದೆಯನ್ನು ಅಪಹರಣ ಮಾಡಿದಾಗ ಮಾಂಡಳಿಕ ರಾಜನಾದ ಸಿಂಹಚೂಡನು ಸ್ತ್ರೀಯನ್ನು ರಕ್ಷಣೆ ಮಾಡಬೇಕೆಂದು ತಡೆಯಲು ಮುಂದೆ ಬಂದು ಚಂಡಶಾಸನ ಕೋಟೆಯನ್ನು ಮುತ್ತಿ ಹೋರಾಡುತ್ತಾ ವೀರ ಮರಣ ಪಡೆಯುತ್ತಾನೆ. ಇಂತಹ ಸಂದರ್ಭದಲ್ಲಿ ಸಿಂಹಚೂಡನ ಜೋಳವಾಳಿಗಳು, ವೇಳೆವಾಟಿಗಳು, ಲೆಂಕರು, ಅವರ ಪತ್ನಿಯರು ಅದರ ಜೊತೆಗೆ ಸಿಂಹಚೂಡನ ಮಡದಿಯರು (ರಾಣಿಯರು) ಎಲ್ಲರೂ ಸಿಂಹಚೂಡನ ಸ್ವಾಮಿನಿಷ್ಟೆಗೆ ಅಗ್ನಿ ಪ್ರವೇಶ ಮಾಡಿ ಮರಣ ಪಡೆಯಲು ಮುಂದಾಗುತ್ತಾರೆ. ಇದನ್ನೇ ಅನಂತನಾಥ ಪುರಾಣ "ಸಹಗಮನ ಸಮುತ್ಸುಕತೆಯಿಂ ಕೈವಿಸೆ ಕೈಗುಡುವ ಕೈದು ಬರ್ಸ ಕೈವಿಡಿದ ಪೆಂಡಿರ ತಂಡ" ಎಂದು ಹೇಳಿದೆ. ಇಲ್ಲಿ ಹೆಂಡಿರ ತಂಡವೂ ಸಹಗಮನ ಮರಣಕ್ಕೆ ಉತ್ಸುಕರಾಗಿರುವುದನ್ನು ತಿಳಿಸಿದೆ. ಇದೇ ಕಾವ್ಯದಲ್ಲಿ ಸುನಂದೆಯು ತನ್ನ ಗಂಡನಿಗಾಗಿ ಅಗ್ನಿ ಪ್ರವೇಶ ಮಾಡಿ ಮರಣ ಪಡೆದಾಗ ಅವಳನ್ನು ಪ್ರೀತಿಸಿದ ಚಂಡಶಾಸನ ಸಹಗಮನ ಮಾಡಿ ಮರಣ ಪಡೆಯುವ ಸಂದರ್ಭ ಮೂಡಿಬಂದಿದೆ.[12] ಹೀಗೆ ಕನ್ನಡ ಕಾವ್ಯಗಳಲ್ಲಿ ಸಹಗಮನ ಮರಣ ಚಿಂತನೆಗಳು ಭಿನ್ನವಾದ ಮನೋಧರ್ಮದಲ್ಲಿ ನಿರೂಪಣೆಗೊಂಡಿವೆ._ಪ್ರಾಚೀನ ಕರ್ನಾಟಕದಲ್ಲಿ ಸ್ತ್ರೀಯರು ಆದರ್ಶ ನಾರಿಯರಾಗಿ ತಮ್ಮ ಶೀಲ ಚಾರಿತ್ರ್ಯದಿಂದ ಬೆಳಗಿದ್ದಾರೆ. ಅಲ್ಲದೆ ಅಂದಿನ ಸಮಾಜದಲ್ಲಿ ತಮಗೆ ಇಷ್ಟವಿಲ್ಲದಿದ್ದರೂ ಶೋಷಣೆ, ದೌರ್ಜನ್ಯಗಳಿಗೆ ಬಲಿಯಾಗಿದ್ದಾರೆ. ಇವಳು ತನ್ನ ಗಂಡ ಯುದ್ಧಕ್ಕೆ ಹೋದಾಗ ಸತ್ತ ಸುದ್ದಿಯನ್ನು ತಿಳಿದು ಪ್ರಾಣಾರ್ಪಣೆ ಮಾಡಿಕೊಂಡಿದ್ದಾಳೆ. ಸ್ವತಃ ತನ್ನ ಗಂಡ ಸತ್ತಾಗ ಅವನ ಜೊತೆಗೆ ಚಿತೆಯೇರಿ ಮರಣವನ್ನು ಪಡೆದಿದ್ದಾಳೆ. ಸಹಗಮನ ಮರಣವು ಪ್ರಪಂಚದ ಎಲ್ಲಾ ಜನಾಂಗಗಳಲ್ಲಿ ಕಂಡು ಬಂದಿದ್ದು ರಾಜಮನೆತನಗಳಲ್ಲಿ ವಿಶೇಷವಾಗಿ ಆಚರಣೆಯಲ್ಲಿದ್ದಿತು. ಸಹಗಮನ ಮರಣಕ್ಕೆ ಧಾರ್ಮಿಕವಾದ ಕೆಲವು ನಂಬಿಕೆಗಳು ಕಾರಣವಾದರು ಸತ್ತ ಗಂಡನಿಗೆ ಅವನ ಜೊತೆ ಹೆಂಡತಿಯು ಸಾಯುವುದರ ಮೂಲಕ ಈ ಲೋಕದಲ್ಲದೆ ಪರಲೋಕದಲ್ಲಿಯೂ ಸಹಕಾರಿಯಾಗಿರಬೇಕೆನ್ನೆವುದು ಸಹಗಮನ ಮರಣಕ್ಕೆ ಕಾರಣವಾಗಿದ್ದಿತು.[1] ಭಾರತ ಮತ್ತು ಕರ್ನಾಟಕದಲ್ಲಿ ರಾಜಮನೆತನಗಳು ಸತಿ ಪದ್ಧತಿಯನ್ನು ರೂಢಿಸಿಕೊಂಡಿರುವುದರ ಕಾರಣ ಜನತೆಯು ಅದನ್ನು ಅನುಸರಿಸಿಕೊಂಡು ಬಂದಂತೆ ಕಾಣುತ್ತದೆ.[2] ವೇದ ಸ್ಮೃತಿ ಪುರಾಣಗಳಲ್ಲಿ ಮನುವಿನ ಶಾಸ್ತ್ರಗಳಲ್ಲಿ ವರಹಮಿಹಿರನ ಬೃಹತ ಸಂಹಿತಗಳಲ್ಲಿ ಸಹಗಮನ ಮರಣದ ಉಲ್ಲೇಖಗಳಿವೆ.[3] ಕರ್ನಾಟಕದಲ್ಲಿ ಮಾಸ್ತಿಗಲ್ಲುಗಳು ಈ ಆಚರಣೆ ಕುರಿತು ಉತ್ತಮ ಮಾಹಿತಿಯನ್ನು ನೀಡಿವೆ. ಸಹಗಮನ ಮರಣವು ಮೊದಮೊದಲು ಒಡಸಾಯುವ, ಸಹಮರಣದ ಆದರ್ಶಗಳಲ್ಲಿ ನಡೆದುಕೊಂಡು ಬಂದಂತೆ ಕಾಣುತ್ತದೆ. ಅದಕ್ಕೆ ಸಹಗಮನ ಮರಣಕ್ಕೆ ಜೊತೆಗೂಡಿ ಸಾಯಿ, ಕೂಡಿ ಸಾಯು ಎಂಬ ಮೊದಲಾದ ಪರಿಕಲ್ಪನೆಯಲ್ಲಿ ಕರೆಯುತ್ತಾರೆ. ಕನ್ನಡ ನಾಡಿನಲ್ಲಿ ದೊರೆತ ಬೆಳತೂರಿನ ದೇಕಬ್ಬೆಯ ಶಾಸನವು ಸಹಗಮನ ಮರಣ ಕುರಿತು ಮಾಹಿತಿ ನೀಡುವ ಮಾಸ್ತಿಕಲ್ಲುಗಳಲ್ಲಿ ತುಂಬಾ ಪ್ರಸಿದ್ಧವಾದುದಾಗಿದೆ. ಈ ಶಾಸನವು ನುಗುನಾಡಿನ ರವಿಗನ

ಮಗಳು ದೇಕಬ್ಬೆ ಇವಳನ್ನು 'ಏಚ' ಎಂಬುವನಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ಆದರೆ 'ಏಚ' ದಾಯಾದಿಗಳೊಂದಿಗೆ ಯುದ್ಧ ಮಾಡುವಾಗ ಸೆರೆ ಸಿಕ್ಕು ಮರಣವನ್ನು ಪಡೆಯುತ್ತಾನೆ. ಈ ಸುದ್ದಿ ತಿಳಿದ ದೇಕಬ್ಬೆಯು ಸಹಗಮನ ಮರಣ ಪಡೆಯಲು ನಿರ್ಧರಿಸುತ್ತಾಳೆ. ಹೀಗೆ ಈ ದೇಕಬ್ಬೆ ಶಾಸನವು ದೇಕಬ್ಬೆಯು ಅನುಗಮನ ಮರಣ ಪಡೆದ ವಿವರವನ್ನು ತಿಳಿಸುತ್ತದೆ.[4]

<u>ಅಡಿಟಿಪ್ಪಣಿಗಳು:–</u>

1. ರುಕ್ಮಿಣಿ, ಎಂ.ಕೆ.: ಜನಪದ ಕಥನ ಗೀತೆಗಳಲ್ಲಿ ಮಹಿಳೆ ಒಂದು ಸಾಂಸ್ಕೃತಿಕ ಅಧ್ಯಯನ, ಕ.ಸಾ.ಪ., ಬೆಂಗಳೂರು, 2008, ಪು.121.
2. ಅದೇ.ಪು.122.
3. ಅದೇ.ಪು.123–124.
4. ಹಿರೇಮಠ, ಆರ್.ಸಿ., ಕಲಬುರ್ಗಿ, ಎಂ.ಎಂ.: ಸಂ. ಶಾಸನ ಸಂಪದ, ಪ್ರಸಾರಾಂಗ, ಕ.ವಿ.ವಿ., ಧಾರವಾಡ, 1995, ಪು.45.
5. ಅನಂತರಂಗಾಚಾರ್, ಎನ್.: ಸಂ.ಪಂಪಭಾರತಂ, (ಗದ್ಯಾನುವಾದ) ಕ.ಸಾ.ಪ., ಬೆಂಗಳೂರು, 2011, ಪು.133. 2–26, 27.
6. ಶ್ರೀಕಂಠಯ್ಯ, ತೀ.ನಂ.: ಸಂ.ಗದಾಯುದ್ಧ ಸಂಗ್ರಹಂ, ಕಾವ್ಯಾಲಯ ಪ್ರಕಾಶನ, ಮೈಸೂರು, 1999, ಪು. 6, 2–5.
7. ಸಣ್ಣಯ್ಯ, ಬಿ.ಎಸ್., ರಾಮೇಗೌಡ: ಸಂ.ಅಜಿತ ತೀರ್ಥಂಕರ ಪುರಾಣಂ, ಕ.ಸಾ.ಪ., ಬೆಂಗಳೂರು, 2004. ಪು.49, 1–47.
8. ಬ್ರಹ್ಮಶಿವನ ಸಮಯ ಪರೀಕ್ಷೆ : ಕಲಬುರ್ಗಿ, ಎಂ.ಎಂ., ಸಮಾಧಿ, ಬಲಿದಾನ, ವೀರಮರಣ, ಸ್ಮಾರಕಗಳು, ಸಪ್ನ, ಬೆಂಗಳೂರು, 2011, ಪು.27.
9. ಅದೇ.ಪು.27–28.
10. ನಾರಾಯಣಶಾಸ್ತ್ರೀ, ಹ.ವೇ.: ಸಂ.ಕರ್ನಾಟಕ ಕಾದಂಬರಿ (ಗದ್ಯಾನುವಾದ) ಕ.ಸಾ.ಪ., ಬೆಂಗಳೂರು, 2011, ಪು.274, ಪ.202.
11. ದೇವಿರಪ್ಪ, ಎಚ್.: ಪದ್ಮನಾಭಶರ್ಮ, ಎಂ.ಸಿ., ಸಂ. ಅನಂತನಾಥ ಪುರಾಣಂ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು, 1972. ಪು.230–233.
12. ಅದೇ.ಪು.242, 12–12.